**ಓ.ಎಸ್. ನಂ. 312/2012 ಡಿ.ಡಬ್ಲೂ-3 ಹೆಸರು - ಬಿ.ಕೆ. ಮರೀಗೌಡ**

**ಸಾಕ್ಷಿಯನ್ನು ದಿನಾಂಕಃ 05/10/2023 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಸಿ.ಎಲ್.ಬಿ. ವಾದಿ ಪರ ವಕೀಲರಿಂದಃ-**

ನಾನು ಐ.ಟಿ.ಐ ಓದಿದ್ದು, ನಂಜನಗೂಡು ಕೆ ಎಸ್ ಆರ್ ಟಿ ಸಿ ಅಲ್ಲಿ ಮೆಕ್ಯಾನಿಕ್ ಆಗಿ ಕೆಲಸ ಮಾಡುತ್ತಿದ್ದೇನೆ. ಪ್ರತಿವಾದಿ ನನ್ನ ದಾಯಾದಿ. ನನ್ನ ತಾತ ಮತ್ತು ಪ್ರತಿವಾದಿಯ ತಾತ ಸ್ವಂತ ಅಣ್ಣ ತಮ್ಮಂದಿರ ಮಕ್ಕಳು. ವಾದಿಯು ಸರ್ವೆ ನಂಬರ್ 289/2 ರ ಸ್ವತ್ತಿಗೆ ಸಂಬಂಧಿಸಿದಂತೆ ದಾವೆ ಸಲ್ಲಿಸಿದ್ದಾರೆ. ಸ್ವತ್ತಿನ ವಿಸ್ತೀರ್ಣ ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ಚೆಕ್ಕುಬಂಧಿ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಖಾಲಿ ಜಾಗ, ಉತ್ತರಕ್ಕೆ ಪ್ರತಿವಾದಿಯ ಖಾಲಿ ಜಾಗ, ದಕ್ಷಿಣಕ್ಕೆ ಮನೆಗಳು ಇವೆ ಯಾರದು ಎಂದು ಗೊತ್ತಿಲ್ಲ. ದಾವಾ ಷೆಡ್ಯೂಲ್ ಸ್ವತ್ತಿನ ಅಕ್ಕ ಪಕ್ಕ ನನಗೆ ಯಾವುದೇ ಆಸ್ತಿ ಇಲ್ಲ. ಪ್ರತಿವಾದಿಯ ಸಹೋದರರ ನಡುವೆ ಆದ ಪಾಲು ಪಾರಿಕತ್ ಗೆ ನಾನು ಸಹಿ ಮಾಡಿದ್ದೇನೆ, ಸದರಿ ಪಾರಿಕತ್ 2001 ರಲ್ಲಿ ಆಗಿದೆ. ಸದರಿ ಪಾರಿಕತ್ ನ ಇನ್ನೊಬ್ಬ ಸಾಕ್ಷಿದಾರರ ಹೆಸರು ನನಗೆ ಗೊತ್ತಿಲ್ಲ. ಪಾರಿಕತ್ ನಲ್ಲಿ ಪ್ರತಿವಾದಿ ಮತ್ತು ಅವರ ಸಹೋದರರಿಗೆ ಯಾವ ಯಾವ ಸ್ವತ್ತುಗಳು ಯಾವ ಯಾವ ವಿಸ್ತೀರ್ಣದಲ್ಲಿ ಯಾರ್ಯಾರಿಗೆ ಬಂದಿದೆ ಎಂದು ನನಗೆ ಗೊತ್ತಿಲ್ಲ. ಪ್ರತಿವಾದಿಯ ತಂದೆ 5 ಗುಂಟೆ ಜಮೀನನ್ನು ಕೆಂಪಮ್ಮ ಎನ್ನುವವರಿಗೆ ಮಾರಿದ್ದರು ಎಂದರೆ ನನಗೆ ಗೊತ್ತಿಲ್ಲ. ಮುದುಗುಂಡಶೆಟ್ಟಿ ಎನ್ನುವವರು ನನಗೆ ಗೊತ್ತಿಲ್ಲ.

ನನಗೆ ದಾವಾ ಸ್ವತ್ತಿನ ಬಗ್ಗೆ ಏನು ಗೊತ್ತಿರದೇ ಇದ್ದರು ಕೂಡ ಪ್ರತಿವಾದಿ ನನ್ನ ಸಂಬಂಧಿಯಾಗಿರುವುದರಿಂದ ಆತನ ಪರವಾಗಿ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರತಿವಾದಿ ಕುಟುಂಬದ ಯಾವುದೇ ಪಾಲು ಪಾರಿಕತ್ ಗೆ ಸಹಿ ಮಾಡಿಲ್ಲ ಎಂದರೆ ಸರಿಯಲ್ಲ. ವಾದಿ ನನಗೆ ಗೊತ್ತಿಲ್ಲ. ಪ್ರತಿವಾದಿ ಹೇಳಿದ್ದರ ಆಧಾರದ ಮೇಲೆ ಈ ದಾವೆಯನ್ನು ಮಹದೇವಮ್ಮ ಸಲ್ಲಿಸಿದ್ದಾರೆ ಎಂದು ಹೇಳುತ್ತಿದ್ದೇನೆ. ದಾವಾ ಸ್ವತ್ತಿನ ಅಕ್ಕಪಕ್ಕದ ಪ್ರತಿವಾದಿಯ ತಂದೆಗೆ ಸೇರಿದ ಜಮೀನನ್ನು ಪ್ರತಿವಾದಿಯ ತಂದೆಯಾಗಲೀ ಅಥವಾ ಪ್ರತಿವಾದಿಯಾಗಲೀ ಅಳತೆ

ಮಾಡಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ.  ಬೇರೆ ಇನ್ಯಾರಾದರು ದಾವಾ ಸ್ವತ್ತಿನ ಅಕ್ಕಪಕ್ಕದ ಜಮೀನುಗಳನ್ನು ಅಳತೆ ಮಾಡಿಸಿದ್ದ ಬಗ್ಗೆ ನನಗೆ ಗೊತ್ತಿಲ್ಲ.

ಮರುವಿಚಾರಣೆ ಇಲ್ಲ.
ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**